
## ಪದಬಂಧ



**ಎಡದಿಂದ ಬಲಕ್ಕೆ**

1. ಅಪ್ರಮೇಯನ ಸಾಮರ್ಥ್ಯಗಳಿಗೆ ಯಾವ ಹೋಲಿಕೆಯೂ ಸಾಧ್ಯವಿಲ್ಲ 4
3. ಮುರುಳಿಯ ಈ ನಾದ ಕೇಳಿದರೆ ಮೈಮರೆವ ಹುಚ್ಚು ಹಿಡಿದೀತು 3
4. ಪುನರ್ವಸು ನಕ್ಷತ್ರವನ್ನು ಗುರುತಿಸುವ ಪರೀಕ್ಷೆಯಲ್ಲಿ ಆತ ಅನುತ್ತೀರ್ಣ 3
6. ಈ ಕುದುರೆಯ ಮಾರಾಟ ಆತನಿಗೇ ಲಭಿಸುವಂತೆ ಮಾಡು 4
7. ವಿಶ್ವಾಮಿತ್ರನ ಮನವನ್ನೇ ಕೆಣಕಿದ ದೇವತೆ ಈಕೆ 3
9. ಕದಿಯಲು ಬಂದವರಿಗೆ ಸಿಕ್ಕಿದ ವಸ್ತು ಕಪ್ಪು ಬಣ್ಣದ್ದು 3
11. ಶಾಮನ ಮನೆ ಮೇಲೆ ನಿನ್ನೆಯಿಂದ ಏನೀ ಪತಾಕೆ? 3
13. ಹೊರಕ್ಕೆ ಬರುವಾಗಲೂ ಅದೇ ಚಿಂದಿ ಬಟ್ಟೆಯೇ? 3
15. ಅಬ್ಬರಿಸುತ್ತ ಬಂದವನ ಸದ್ದಡಗಿಸಿದ ಗೌರೀ ಪುತ್ರ 4
17. ರಾದ್ಧಾಂತಕ್ಕೆ ಕಾರಣವಾದ ಪದ್ಧತಿಯನ್ನೇ ಕೈ ಬಿಡುವುದೇ? 3
18. ಉಚಿತವಲ್ಲದ ಯೋಜನೆಗಳೆಲ್ಲ ತ್ಯಜಿಸಲ್ಪಟ್ಟಿವೆ 3
19. ಆಧುನಿಕ ಮಾನವ ಬಂದ ನಂತರದ ಹೊಸ ಯುಗ 4

**ಮೇಲಿನಿಂದ ಕೆಳಕ್ಕೆ**

1. ಕಳಂಕವೆಂದರೇ ಆಕೆಗೆ ಬಹಳ ಭಯ, ಹಿಂಜರಿತ 3
2. ಸುಮ್ಮನಿರುವುದನ್ನೂ ಕಲಿಯಬೇಕು ಎಲ್ಲರ ಚಿತ್ತ 3
3. ಮೂರೂ ಜನ ಬಂದೊಡನೆ ಮೊದಲು ಸ್ನಾನ ಆಗಲಿ 3
5. ಪಾಸು ಮಾಡಿ ಬಂದವರಿಗೆ ನೀಡಲು ಈ ಅಡಿಕೆ 3
7. ನಿಂದನೆ ಮಾಡುವವರನ್ನೂ ಕಾಪಾಡಬಹುದೇ ಇದೇ ಭೂಮಿ? 3
8. ಕತ್ತಲೆಯನ್ನೆಲ್ಲ ದೂರಮಾಡಿದರೆ ಕಂಡೀತು ಕಲ್ಲಿನಲ್ಲಿ ಕಡೆದಿರುವ ಈ ಕಲೆ 3
9. ಹಳ್ಳಕ್ಕೆ ಬಿದ್ದು ಮೇಲೆದ್ದು ಬಂದು ಜಗಳ 3
10. ಕಂಡದ್ದನ್ನೆಲ್ಲ ಹೀಗೆ ಕೊಂಡು ತಂದದ್ದು ಆತುರದ ಕೆಲಸ 3
12. ಶರೀರದ್ದೇ ಒಂದು ಗುಣ ಈ ಕಂಠ ಮಾಧುರ್ಯ 3
14. ಏನೂ ತರದೆ ಬಂದಿದ್ದಕ್ಕೆ ಹೀಗೆ ಭಾರೀ ಗೋಳಾಟ 3
15. ಆತ್ಮ ವಿಮರ್ಶೆಗೆ ಈ ಅವಕಾಶ ಕೊನೆಯದು 3
16. ತವರೂರಿನಿಂದ ತರುವುದೇ ಸರಿ, ಈ ಬಿಳೀ ಬಣ್ಣದ ಲೋಹ 3

---

### 04–12–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಹಟಮಾರಿ 3. ಜಗಳ 4. ವಾಮನ 6. ಭಯಂಕರ 8. ಪಾರಿಜಾತ 10. ನಡುಗಾಲ 12. ರಜಾಕಾಲ 16. ಲಕುಮಿ 17. ಮನವಿ 18. ತರಕಾರಿ

**ಮೇಲಿನಿಂದ ಕೆಳಕ್ಕೆ**


1. ಹಳದಿ 2. ರಿವಾಜು 3. ಜಳಕ 5. ನಗರಿ 6. ಭಕ್ತಜನ 7. ರಸಾತಲ 8. ಪಾರಾವಾರ 9. ತಪೋಬಲ 11. ಗಾವಿಲ 13. ಜಾಹ್ನವಿ 14. ಅಮಿತ 15. ಕಮರಿ

ಪ್ರಶ್ನಾಂಕಣ

# ಸಾಗರದಲ್ಲಿ ಏನೇನು ನಿಧಿನಿಕ್ಷೇಪ?

ಸಾಗರ ಭೂಮೇಲ್ಮೈನ ಶೇಕಡ 71ರಷ್ಟು ಪ್ರದೇಶವನ್ನು ಆವರಿಸಿರುವ ಜೀವಾವಾರ ಅದು. ಸಾಗರಾವಾರ ಅಪಾರವೆನಿಸುವಂತಹ ಜಲಾವಾರ, ಜೀವಾವಾರ ಅಷ್ಟೇ ಅಲ್ಲ; ಅದು ಅಪಾರ ನಿಧಿನಿಕ್ಷೇಪಗಳ ಆಕರ ಕೂಡ. ಕಡಲಲ್ಲಿ, ಕಡಲ ನೀರಿನಲ್ಲಿ, ಕಡಲ ತಳದಲ್ಲಿ, ಕಡಲಿನ ನೆಲದ ಕೆಳಗೆ ಕೂಡ ನಿರಂತರ ಹೇರಳ ಭೌತಿಕ, ರಾಸಾಯನಿಕ ಮತ್ತು ಭೂ ವೈಜ್ಞಾನಿಕ ಕ್ರಿಯೆಗಳು ಜರುಗುತ್ತಲೇ ಇವೆ. ಹಾಗಾಗಿ ನಾನಾ ಬಗೆಗಳ ಸಂಪನ್ಮೂಲಗಳು ಕಡಲಿನಾವಾರದಲ್ಲಿ ಮೈದಳೆಯುತ್ತಲೇ ಇವೆ; ಸಂಗ್ರಹವಾಗುತ್ತಲೂ ಇವೆ. ಕಡಲಿನ ಪ್ರಮುಖ ನಿಧಿನಿಕ್ಷೇಪಗಳ ಸಂಕ್ಷಿಪ್ತ ಪರಿಚಯ:

- ಮೊದಲಿಗೆ ಮನುಷ್ಯರಿಗೆ ಸಾಗರ ಅಪಾರ ಆಹಾರ ಸಂಗ್ರಹಾಗಾರ. ಮತ್ಸ್ಯಗಳು, ಸೀಗಡಿಗಳು, ಮೃದ್ವಂಗಿಗಳು ಇತ್ಯಾದಿ ಸಾಗರ ಜೀವಿಗಳನ್ನು ಆಹಾರಕ್ಕಾಗಿ ಪ್ರತಿ ವರ್ಷ 223 ದಶಲಕ್ಷ ಟನ್‌ಗಳಷ್ಟನ್ನು ಹೊರತೆಗೆಯಲಾಗುತ್ತಿದೆ.
- ಸಾಗರದ ನೀರಿನಲ್ಲಿ ಒಟ್ಟು 47 ವಿಧಗಳ ಖನಿಜಗಳು ಮತ್ತು ಲೋಹಗಳು ಬೆರೆತಿವೆ: ಸೋಡಿಯಂ, ಪೊಟಾಸಿಯಂ, ಮೆಗ್ನೀಸಿಯಂ, ಬಂಗಾರ ಇತ್ಯಾದಿ. ಕಡಲ ನೀರಿನಲ್ಲಿ ಒಟ್ಟು 20 ದಶಲಕ್ಷ ಟನ್ ಬಂಗಾರ ಕದಡಿಹೋಗಿದೆ. ಹಾಗೆಂದರೆ ಇಂದು ಭೂಮಿಯಲ್ಲಿರುವ ಪ್ರತಿಯೊಬ್ಬ ಮನುಷ್ಯರಿಗೂ 25 ಕಿಲೋ ಸಿಗುವಷ್ಟು ಬಂಗಾರ! (ಅದನ್ನು ಲಾಭದಾಯಕವಾಗಿ ಬೇರ್ಪಡಿಸುವ ವೈಜ್ಞಾನಿಕ ತಂತ್ರ ಯಾವುದೂ ಈವರೆಗೂ ಸಿದ್ಧಿಸಿಲ್ಲ)
- ಭೂಮಿಯಲ್ಲಿರುವ ಪೆಟ್ರೋಲಿಯಂನ ಶೇಕಡ 26 ಭಾಗ (ಎಂದರೆ 41 ಶತಕೋಟಿ ಟನ್) ಕಡಲಿನ ನೆಲದ ಕೆಳಗೆ ಶೇಖರಗೊಂಡಿದೆ. ಹಾಗೆಯೇ ಕಲ್ಲಿದ್ದಲು ಕೂಡ. ಯು.ಕೆ ಯ 'ನಾರ್ತ್ ಸೀ' ಒಂದರ ನೆಲದ ಕೆಳಗೇ 23 ಲಕ್ಷ ಕೋಟಿ ಟನ್ ಕಲ್ಲಿದ್ದಲಿನ ನಿಕ್ಷೇಪ ಇದೆ.
- ಅಡುಗೆ ಉಪ್ಪಿಗಂತೂ (ಸೋಡಿಯಂ ಕ್ಲೋರೈಡ್) ಸಾಗರ ಒಂದು ಪ್ರಧಾನ ಆಕರ. ಪ್ರತಿ ವರ್ಷ ಸಾಗರದಿಂದ ಪಡೆಯುತ್ತಿರುವ ಉಪ್ಪಿನ ಪ್ರಮಾಣ 300 ದಶಲಕ್ಷ ಟನ್ ಮೀರಿದೆ. ಹಾಗೆಯೇ ಹೆದ್ದಾರಿಗಳು, ಸೇತುವೆಗಳು, ಜಲಾಶಯಗಳು ಇತ್ಯಾದಿ ಬೃಹತ್ ನಿರ್ಮಾಣಗಳಿಗಾಗಿ ಮತ್ತು ಗಾಜಿನ ತಯಾರಿಕೆಗೆ ಪ್ರತಿ ವರ್ಷ ಕಡಲಿನಿಂದ ಸುಮಾರು ಎಂಟು ಶತ ಕೋಟಿ ಟನ್ ಮರಳನ್ನು ಹೊರತೆಗೆಯಲಾಗುತ್ತಿದೆ.



- ಸಾಗರಾಂತರ್ಗತ ಜ್ವಾಲಾಮುಖಿಗಳ ಮೂಲಕ ವಜ್ರವೂ ಸೇರಿದಂತೆ ನಾನಾ ಅಮೂಲ್ಯ ರತ್ನಗಳೂ ಭೂ ಅಂತರಾಳದಿಂದ ಹೊರಬಂದು ಸಾಗರದ ನೆಲದಲ್ಲಿ ಹರಡಿವೆ. ಇನ್ನು ನವರತ್ನಗಳ ಪಟ್ಟಿಯಲ್ಲೇ ಇರುವ ಜೈವಿಕ ರತ್ನಗಳಾದ ಮುತ್ತು ಮತ್ತು ಹವಳಗಳಿಗಂತೂ ಸಾಗರವೇ ಏಕೈಕ ಆಕರ.

■ ಎನ್. ವಾಸುದೇವ್